ಮೇಲೋ? ತಿಂಗಳುಗಟ್ಟಲೆ ಆಫೀಸಿನ ನೆನಪೂ ಇಲ್ಲದವನಂತೆ, ಮನೆಗೆ ಬಂದು ಮಾತು ಕತೆಯಿಲ್ಲದೆ ರೂಮಿನೊಳಗೇ ಕುಳಿತು ದಿನಕಳೆದು ಮತ್ತೆ ಮೈಸೂರಿಗೆ ವಾಪಸ್ಸಾದ ವೇಣುವಿನ ಮೇಲೋ? ಒಂದಿನ ಜಗಳ, ಒಂದಿನ ಪ್ರೀತಿ ಎಂದು ಗಂಡ ಹೆಂಡಿರೇ ದಿನಕಳೆಯುವುದು ಗೊತ್ತಿದ್ದರೂ, ಇವರಿನ್ನೂ ಚಿಕ್ಕವರು ಎಂದೂ ಎಣಿಸದೆ, ಕೋಪವನ್ನಾರಲೂ ಸಮಯ ಕೊಡದೆ ರಾಧಾಳ ಮದುವೆಗೆ ಮುಂದಾದ ಗಜುವಿನ ಮೇಲೋ? ಇಲ್ಲಿಯವರೆಗೆ ಯಾವ ಲೆಕ್ಕಕ್ಕೆ ಇರದಿದ್ದರೂ ರಾಧಾಳನ್ನು ಸೊಸೆಯಾಗಿ ಒಪ್ಪಿಕೊಳ್ಳಲು ತಯಾರಾದ ನಾಗರಾಜ ಮತ್ತು ಬಂಗಾರಿ ಮೇಲೋ? ಊಹೂಂ... ಇವರ್‍ಯಾರೂ ಅಲ್ಲ... ಎಲ್ಲಾ ಅವಾಂತರಗಳನ್ನು ತಿಳಿದೂ ತಿಳಿದು ರಾಧಾಳನ್ನು ಮದುವೆಯಾಗಲು ಒಪ್ಪಿಕೊಂಡ ಶೇಖರನೇ ಎಲ್ಲರಿಗಿಂತ ಕ್ರೂರಿ. ಪಾಪ ರಾಧಾ ಯಾವುದೋ ಭಾವನೆ, ತಾಕಲಾಟಗಳಿಗೆ ಒಳಗಾಗಿ ದುಡುಕಿದರೂ ಶೇಖರನಿಗೇನು ರೋಗ ಬಡಿದಿತ್ತು ಈ ಮದುವೆಗೆ ಒಪ್ಪಿಕೊಳ್ಳಲು!!

ನಮ್ಮ ರಾಧೆ ಎಲ್ಲಿ ಸಿಕ್ಕಿದರೂ ಸರಿಯೇ, ಎಷ್ಟು ಜನರ ಮಧ್ಯೆ ಇದ್ದರೂ ಸರಿಯೇ ವೇಣು ಅಂತ ಕೂಗಿ ಚುಡಾಯಿಸುತ್ತಿದ್ದ ಶೇಖರ, ತಾನು ಬೆಂಗಳೂರಿಗೆ ಹೋಗುವಾಗ ರಾಧಾಳ ಪತ್ರಗಳನ್ನು ಮೈಸೂರಿಗೆ ಮುಟ್ಟಿಸಿ ಹೋಗುತ್ತಿದ್ದ ಶೇಖರ, ಗಿರಿಜತ್ತಿಗೆಯ ಮನೆಗೆ ಬಂದು 'ನಿನ್ನ ಸೊಸೆ ಎಂದರೆ ಸೊಸೆ ಮಾರಾಯ್ತಿ, ಗಂಡನಾಗುವವನಿಗಿಂತ ಅತ್ತೆಯನ್ನೇ ಹಚ್ಚಿಕೊಂಡುಬಿಟ್ಟಿದ್ದಾಳೆ. ಪಾಪ ನಮ್ಮ ವೇಣು' ಎಂದು ಉಬ್ಬಿಸಿ ಸಿಹಿ ತಿಂದು ಹೋಗುತ್ತಿದ್ದ ಶೇಖರ... ಈಗ ತಾನೇ ರಾಧಾಳನ್ನು ಮದುವೆಯಾಗಲು ಒಪ್ಪಿದ್ದು ಎಲ್ಲಿಯ ನ್ಯಾಯ?

ಗಿರಿಜತ್ತಿಗೆಗೆ ಎಲ್ಲವೂ ಒಗಟಿನಂತೆ ತೋರತೊಡಗಿತ್ತು. ಆಟಕ್ಕುಂಟು ಆದರೆ ಲೆಕ್ಕಕ್ಕಿಲ್ಲ ಎಂದಿದ್ದವಳು ತಾನೇ. ತನ್ನ ಬಳಿಯೂ ಹೇಳಲಾಗದಂತಹ ಎಂತಹ ಗುಟ್ಟು ಅವರಲ್ಲಿರಬಹುದು? ಈಗ ಶೇಖರನಿಗೂ ಆ ಗುಟ್ಟು ತಿಳಿಯದಿರಲು ಸಾಧ್ಯವೇ ಇಲ್ಲ. ಕಡೆಯಲ್ಲಿ ಎಲ್ಲರಿಗಿಂತ ದೂರ ಇಡಲ್ಪಟ್ಟವಳು ತಾನೇ!... ಗಿರಿಜತ್ತಿಗೆ ಸಣ್ಣಗೆ ಕಣ್ಣೀರಾದಳು. ಸೊಸೆ ಎಂದರೆ ಸಾಕು ಅಸೂಯೆ ಕಾರುವವರ ನಡುವೆ ಸೊಸೆಯಾಗುವವಳೆಂದು ಹಚ್ಚಿಕೊಂಡು, ಅವಳನ್ನು ಮನೆ ಜನರಂತೆ ಕಂಡು ಈಗ ಅವಳದ್ದೇ ಮದುವೆಗೆ ನೆಂಟರಂತೆ ಹೋಗಿ ಬರಬೇಕಲ್ಲ, ವಿಪರ್ಯಾಸವೋ, ಅನಿವಾರ್ಯವೋ, ಅಸಹಾಯಕತೆಯೋ... ಒಟ್ಟಿನಲ್ಲಿ ಹಿಂಸೆ ಅಷ್ಟೇ.

ಚಿಂತಿಸುತ್ತಲೇ ಪಟೀತಾಗಿ ಕೊಚ್ಚಿದ ನೆರಿಗೆಗಳನ್ನು ಲಂಗದೊಳಗೆ ತುರುಕಿ, ಎರಡೆಳೆ ಹವಳದ ಸರ, ಹಸಿರು ಬಳೆಗಳ ಆಚೀಚೆ ನಾಲ್ಕು ನಾಲ್ಕು ಪಾಟ್ಲಿ ಬಳೆ ತೊಟ್ಟು ಗಿರಿಜತ್ತಿಗೆ ತಯಾರಾದಳು. ಕಾಸಗಲ ಬೊಟ್ಟು, ನಕ್ಷತ್ರಾಕಾರದ ಮೂಗುಬಟ್ಟು... ಕನ್ನಡಿಯಲ್ಲಿ ಕಾಣುತ್ತಿದ್ದ ತನ್ನ ಚಂದಕ್ಕೆ ತಾನೇ ಒಮ್ಮೆ ಮರುಳಾದಳು.

ಅಪ್ಪನ ಪ್ರಪಂಚ, ಅಮ್ಮನ ಮುದ್ದಿನ ಮಗ ವೇಣು ಅಮ್ಮನ ತದ್ರೂಪ. ರಾಧಾಳಿಗಿಂತ ತನ್ನ ಮಗ ವೇಣುವೇ ಚಂದದಲ್ಲಿ ಒಂದು ಹೆಜ್ಜೆ ಮುಂದು ಎಂದು ಗಿರಿಜತ್ತಿಗೆಗೆ ಹಲವು ಬಾರಿ ಎನ್ನಿಸಿದ್ದುಂಟು. ಆದರೆ ಗುಣದಲ್ಲಿ ಮಾತ್ರ ರಾಧಾ ಅಪ್ಪಟ ಚಿನ್ನ, ಎರಡನೇ ಮಾತಿಲ್ಲ.

ವೇಣುವಿಗೂ ರಾಧಾ ಎಂದರೆ ಜೀವವೇ. ವೇಣು ಊರಿಗೆ ಬಂದರೆ, ಅವರಿಬ್ಬರ ಕಾಲಿಗಂಟಿದ ಚಕ್ರ ಬಿಡಿಸಲು ಖುದ್ದು ಗಜಾನನಿಗೂ ಆಗಿರಲಿಲ್ಲ. ಅವರಿಬ್ಬರ ಊರು ಸುತ್ತಾಣ ಗಿರಿಜತ್ತಿಗೆಗೆ ಕುತ್ತಿಗೆವರೆಗೆ ಬಂದಿದ್ದರೆ ಗಜಾನನಿಗಂತೂ ಮೂಗಿನವರೆಗೇ ಬರುತ್ತಿತ್ತು, ಹೆಣ್ಣು ಹೆತ್ತವರಲ್ಲವೇ? ಆದರೂ ಏನೂ ಹೇಳುವಂತಿಲ್ಲ. ವೇಣು ಎಷ್ಟೆಂದರೂ ಕಾಡ್ಮನೆಯ ಭಾವಿ ಅಳಿಯ.